ದಿನಾಂಕ: 25.07.2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಶ್ರೀ ಎಸ್ ಪಿ ವಕೀಲರಿಂದಃ**

ಮೂಲ ಪುರುಷ ಕುಂಟ ಚಿತ್ತಪ್ಪನಿಗೆ ಸರ್ವೆ ನಂ.39 ರಲ್ಲಿ ಐಟಂ ನಂ.1 ರಲ್ಲಿ 9 ಎಕರೆ 2 ಗುಂಟೆ ಆಸ್ತಿ ಇತ್ತು ಎಂದರೆ ನಿಜ . ಆ ಒಂದೇ ಆಸ್ತಿ ಅವರಿಗೆ ಇದ್ದಿದ್ದು ಎಂದರೆ ನಿಜ. ಬಾಲಣ್ಣ ಮತ್ತು ದಾಸಣ್ಣ ಇವರು ಕುಂಟಚಿತ್ತಪ್ಪನ 1 ನೇ ಮಗ ಕರಿಯಪ್ಪನ ಮಗಳಾದ ಕರಿಯಮ್ಮನ ಮಕ್ಕಳು . ಸರ್ವೆ ನಂ.7/9 ಐಟಂ ನಂ.3 ರ ಲ್ಲಿ ಕರಿಯಮ್ಮನಿಗೆ ಜಂಟಿ ಖಾತೆಯಾಗಿರುತ್ತದೆ. ಪ್ರತಿವಾದಿಗಳು ಎದುರು ಕ್ಲೈಂ ಕೇಳಿದ ವಿಚಾರ ನನಗೆ ಗೊತ್ತಿರುವುದಿಲ್ಲ . ಸರ್ವೆ ನಂ.42 ರಲ್ಲಿ 11 ಎಕರೆ 8 ಗುಂಟೆ ಎಂದರೆ ನಿಜ . ಸದರಿ ಜಮೀನನ್ನು ಕರಿಯಪ್ಪ , ಈರಪ್ಪ ಮತ್ತು ಬಿಳಿಯಪ್ಪ ಇವರು ಒಟ್ಟು ಕುಟುಂಬದಿಂದ ಖರೀದಿ ಮಾಡಿದ್ದಾರೆ ಎಂದು ಹೇಳುತ್ತಾರೆ . ಸದರಿ ಕ್ರಯ ಪತ್ರವನ್ನು ನಾನು ನೋಡಿಲ್ಲ . 1 ನೇ ಕರಿಯಪ್ಪ 04.09.1947 ರ ಲ್ಲಿ ಅವರು ತಮ್ಮ ಸ್ವಂತಕ್ಕೆ ಸ್ವಯಾರ್ಜಿತವಾಗಿ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ . ಒಟ್ಟು ಕುಟುಂಬದಿಂದ ಬಂದ ಆದಾಯದಿಂದ ಖರೀದಿ ಮಾಡಿದ್ದಾರೆ ಎಂದು ತೋರಿಸಲು ದಾಖಲೆ ಹಾಜರು ಮಾಡಿಲ್ಲ . ಸಾಕ್ಷಿ ಮುಂದುವರೆದು ಆಕಾರ್ ಬಂದ್ ಮ್ಯುಟೇಷನ್ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ .

ಪ್ರತಿವಾದಿಗಳು 1 ನೇ ಕರಿಯಪ್ಪನ ವಂಶಸ್ಥರು ಎಂದರೆ ನಿಜ . ಕರಿಯಪ್ಪ , ಈರಪ್ಪ , ಬಿಳಿಯಪ್ಪ ಇವರು 1942 ಕ್ಕಿಂತ ಮುಂಚೆ ಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ . 1942 ರ ನಂತರ ಕರಿಯಪ್ಪ , ಈರಪ್ಪ , ಬಿಳಿಯಪ್ಪ ಇವರು ಒಟ್ಟು ಕುಟುಂಬದಲ್ಲಿ ಇದ್ದರು ಎಂದು ತೋರಿಸಲು ದಾಖಲೆ ಹಾಜರು ಪಡಿಸಿಲ್ಲ . ಸಾಕ್ಷಿ ಆಗಿನ ದಾಖಲೆಗಳು ಇಲ್ಲ 1989-90 ರ ನಂತರ ದಾಖಲೆಗಳು ಇವೆ ಎಂದು ನುಡಿಯುತ್ತಾರೆ .

ಸರ್ವೆ ನಂ.7/9 ರ 7 ಎಕರೆ 23 ಗುಂಟೆ 1 ನೇ ಕರಿಯಪ್ಪ ಅವರ ಸಹೋದರರಿಂದ ಪ್ರತ್ಯೇಕವಾದ ನಂತರ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ . ಸಾಕ್ಷಿ ಒಟ್ಟು ಕುಟುಂಬದಿಂದ ಕೊಂಡುಕೊಂಡಿದ್ದಾರೆ ಎಂದು ನುಡಿಯುತ್ತಾರೆ . 1942-52 ರವರಿಗೆ ಆ ಆಸ್ತಿಗಳ ಖಾತೆಯು

ಕರಿಯಪ್ಪನ ಹೆಸರಿಗೆ ಇತ್ತು ಎಂದರೆ ಸಾಕ್ಷಿ ಅವರು ನಮ್ಮ ಕುಟುಂಬದ ಹಿರಿಯ ಸದಸ್ಯರಾಗಿದ್ದರಿಂದ ಅವರ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ .

4 ಆಸ್ತಿಗಳನ್ನು ಹೊರತು ಪಡಿಸಿ ನಮ್ಮ ಒಟ್ಟು ಕುಟುಂಬಕ್ಕೆ ಬೇರೆ ಆಸ್ತಿಗಳು ಇರುವುದಿಲ್ಲ . ಪ್ರತಿವಾದಿಗಳು ಕುರಿ ಕಾಯುವ ವೃತ್ತಿ ಮಾಡುತ್ತಾರೆ ಎಂದರೆ ನಿಜ . ಅವರೆಲ್ಲರೂ ಸುಮಾರು 6 ತಿಂಗಳುಗಳ ಕಾಲ ಹಾಸನ , ಮೈಸೂರಿಗೆ ವಲಸೆ ಹೋಗುತ್ತಾರೆ ಎಂದರೆ ಸಾಕ್ಷಿ ಕೆಲವರು ಇರುತ್ತಾರೆ ಎಂದು ಹೇಳುತ್ತಾರೆ . ಪ್ರತಿವಾದಿಗಳು ಜಾಸ್ತಿ ಓದಿಲ್ಲ ಎಂದರೆ ಸರಿ . ಸಾಕ್ಷಿ ಮುಂದುವರೆದು ಸಾಧಾರಣ ಮಟ್ಟಿಗೆ ಅಂದರೆ 8-9 ತರಗತಿ ಓದಿರಬಹುದು ಎಂದು ನುಡಿಯುತ್ತಾರೆ . ನಾನು ವಿದ್ಯಾವಂತನಲ್ಲ ಆದರೆ ಸ್ವಲ್ಪ ಬುದ್ದಿವಂತ. ದಾವಾ ಐಟಂ ನಂ.1 ಮತ್ತು 2 ರ ಆಸ್ತಿಗಳು 2014-15 ರ ವರೆಗೂ ಕರಿಯಣ್ಣ ತಂದೆ ಕುಂಟ ಚಿತ್ತಪ್ಪನವರ ಹೆಸರಿಗೆ ಇತ್ತು ಎಂದರೆ ಸರಿಯಲ್ಲ . 1989-90 ರಿಂದಲು ಎದುರು ಕ್ಲೈಮ್ ಆಸ್ತಿಯು ಕರಿಯಪ್ಪನ ಹೆಸರಿಗೆ ಇತ್ತು ಎಂದರೆ ಸಾಕ್ಷಿ ಕರಿಯಪ್ಪ ಈರಪ್ಪ ಬಿಳಿಯಪ್ಪನ ಹೆಸರಿಗೆ ಜಂಟಿಯಾಗಿತ್ತು ಎಂದು ಹೇಳುತ್ತಾರೆ .

ನಿಪಿ-7 ದಾಖಲೆಯಲ್ಲಿ ನಾನು ಪ್ರತಿವಾದಿಯರಲ್ಲಿ ಒಬ್ಬರನ್ನು ಬಿಳಿಯಪ್ಪ ಎಂದು ತೋರಿಸಿ ಮೋಸದಿಂದ 2014-15 ರಲ್ಲಿ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ . ಅವರು ಕುರಿಗಾಯಿಗಳಾಗಿದ್ದರಿಂದ ಅವರು ಊರಿನಲ್ಲಿ ಇಲ್ಲದೇ ಇದ್ದಾಗ ನೋಟೀಸನ್ನು ಹೊರಡಿಸಿ ತಪ್ಪಾಗಿ ಖಾತೆ ಬದಲಾವಣೆ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ . ಎದುರು ಕ್ಲೈಮ್ ಐಟಂ ನಂ.3 ಸರ್ವೆ ನಂ.4/1 21 ಎಕರೆ ಕರಿಯಪ್ಪನಿಗೆ ದರಕಾಸ್ತು ಮೂಲಕ ಬಂದಿದೆ ಎಂದರೆನಿಜ. ಸಾಕ್ಷಿ ಮುಂದುವರೆದು ಆಗ ಒಟ್ಟು ಕುಟುಂಬದಲ್ಲಿ ಇದ್ದಾಗ ಮಂಜೂರಾಗಿದೆ ಎಂದು ನುಡಿಯುತ್ತಾರೆ . ಆ ರೀತಿ ಬಂದ ಲಗಾಯಿತಿಯಿಂದ ಕರಿಯಪ್ಪ ಮತ್ತು ಅವರ ಮಕ್ಕಳೇ ಸ್ವಾದೀನದಲ್ಲಿ ಇದ್ದರು ಎಂದರೆ ಸರಿಯಲ್ಲ . ಸಾಕ್ಷಿ ಕರಿಯಪ್ಪ ಮತ್ತು ಅವರ ಸಹೋದರರು ಮತ್ತು ಮಕ್ಕಳು ಸ್ವಾದೀನದಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ. ಸ್ವಾದೀನದಲ್ಲಿ

ಇದ್ದೇವೆ ಎಂದು ತೋರಿಸಲು ದಾಖಲೆಗಳು ಇವೆ. ಸಾಕ್ಷಿ ಮುಂದುವರೆದು ಪಹಣಿಗಳು ನಮ್ಮ ಹೆಸರಿಗೆ ಇವೆ. ಸರ್ವೆ ನಂ.4/1 ರಲ್ಲಿ 21 ಎಕರೆ ಜಮೀನಿನಲ್ಲಿ 5 ಬೋರ್ ಹಾಕಿಸಿಕೊಂಡು ವ್ಯವಸಾಯಮಾಡುತ್ತಿದ್ದಾರೆ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರೆದು ನಾವು 7 ಎಕರೆ ಅನುಭವಿಸಿಕೊಂಡು ಬರುತ್ತಿದ್ದೇವೆ ಎಂದು ನುಡಿಯುತ್ತಾರೆ . ಎದುರು ಕ್ಲೈಮ್ ನಲ್ಲಿ ನಾವಾಗಲೀ ಬಿಳಿಯಪ್ಪನ ಮಕ್ಕಳಾಗಲೀ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ .

ಸರ್ವೆ ನಂ.161 /4 ಎ ಆಸ್ತಿಯು ನಮಗೆ ಸಂಬಂಧಪಟ್ಟಿರುವುದಿಲ್ಲ . ಸರ್ವೆ ನಂ.161 / 4 ಎ ಆಸ್ಸಿ 6 ಎಕರೆ 23 ಗುಂಟೆ 10 ನೇ ವಾದಿ ಚಿತ್ತಪ್ಪ ತಂದೆ ಬಿಳಿಯಪ್ಪನ ಜಮೀನು ಎಂದರೆ ಸರಿಯಲ್ಲ . ಸರ್ವೆ ನಂ.44/1 10 ನೇ ವಾದಿಗೆ ಸೇರಿದೆ ಎಂದರೆ ನಿಜ . ಆ ಆಸ್ತಿಯು ಬಿಳಿಯಪ್ಪನಿಗೆ ದರಕಾಸ್ತು ಮೂಲಕ ಬಂದಿದೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಬಿಳಿಯಪ್ಪನ ಮಗ ಚಿತ್ತಪ್ಪನಿಗೆ ಬಂದಿದೆ ಎಂದು ನುಡಿಯುತ್ತಾರೆ. ಬಿಳಿಯಪ್ಪನ ಮಗ ಚಿತ್ತಪ್ಪ ನನ್ನ ತಾತನ ತಮ್ಮನ ಮಗ. ಬಿಳಿಯಪ್ಪನ ಹೆಸರಿಗೆ ದರಕಾಸ್ತು ಆಗಿದೆ ಎಂದರೆ ಸರಿಯಲ್ಲ . 1955-56 ರಲ್ಲಿ ದರಕಾಸ್ತು ಆಗಿದೆ ಎಂದರೆ ಸರಿ .

ಸರ್ವೆ ನಂ.17/1 ಲಾಯರ್ ದಾಸರಹಳ್ಳಿ ಯಲ್ಲಿರುವ ಆಸ್ತಿ ನಮ್ಮ ವಂಶಸ್ಥರ ಆಸ್ತಿ ಎಂದರೆ ಸರಿಯಲ್ಲ . ಆ ಆಸ್ತಿಯು ಚಿತ್ತಣ್ಣ ಬಿನ್ ಈರಪ್ಪ 8 ನೇ ವಾದಿಯ ಆಸ್ತಿ ಎಂದರೆ ಗೊತ್ತಿಲ್ಲ . ಸರ್ವೆ ನಂ.13/1 ಕರಿಯಪ್ಪನವರ ಸ್ವಯಾರ್ಜಿತ ಆಸ್ತಿ . ಅದರಲ್ಲಿ ನಮಗೆ ಮಾತ್ರ ಹಕ್ಕು ಇರುತ್ತದೆ . ಈ ದಾವಾ ಸಲ್ಲಿಸುವ ಪೂರ್ವ 2016 ರಲ್ಲಿ ಪ್ರತಿವಾದಿಗಳ ವಿರುದ್ಧ ದಾವೆ ಸಲ್ಲಿಸಿ ನಾವೇ ವಜಾ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ . ಎದುರು ಕ್ಲೈಮ್ ಆಸ್ತಿಗಳು ಪ್ರತಿವಾದಿಗಳ ತಾತ ಕರಿಯಣ್ಣ ಬಿನ್ ಕುಂಟ ಚಿತ್ತಪ್ಪನ ಸ್ವಯಾರ್ಜಿತ ಆಸ್ಥಿಗಳು ಎಂದರೆ ಸರಿಯಲ್ಲ . ಸರ್ವೆ ನಂ.161, 17/1, 44, 13/1, 17/1 ಆಸ್ತಿಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳು ಅಲ್ಲ. ಈ ಆಸ್ತಿಗಳಲ್ಲಿ

ಪ್ರತಿವಾದಿಯರಿಗೆ ಭಾಗ ಇರುವುದಿಲ್ಲ . ಈ ಆಸ್ತಿಗಳನ್ನು ನಾವು ಕೊಂಡಿರುವುದಿಲ್ಲ . ಈ ಆಸ್ತಿಗಳು ನಮಗೆ ಸಂಬಂಧವಿಲ್ಲ .

ಸರ್ವೆ ನಂ.7/9 ರಲ್ಲಿ 7 ಎಕರೆ 23 ಗುಂಟೆಯಲ್ಲಿ 35 ತೆಂಗಿನ ಮಾರ 4-5 ಹುಣಸೆ ಮರಗಳು ಇದ್ದು ಪ್ರತಿವಾದಿಗಳೇ ಅದರಲ್ಲಿ ಫಲವನ್ನು ಪಡೆದುಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ . ದಾವಾ ಐಟಂ ನಂ.2 ರಿಂದ 4 ರಲ್ಲಿ ನಮಗೆ ಯಾವುದೇರೀತಿ ಹಕ್ಕು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ . 1989-90 ರಲ್ಲಿ ನಾನು ಬಿಳಿಯಪ್ಪನವರ ಸಹಿಯನ್ನು ಫೊರ್ಜರಿ ಮಾಡಿ ಅವರು ಊರಿನಲ್ಲಿ ಇಲ್ಲದೇ ಇದ್ದಾಗ ಖಾತೆ ನಮ್ಮ ಹೆಸರಿಗೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ . ಕೌಂಟರ್ ಕ್ಲೇಮ್ ಆಸ್ತಿಯಲ್ಲಿ ನಮಗಾಗಲೀ , ಇತರೆ ವಾದಿಗಳಿಗಾಗಲೀ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರೆದು ಅದು ಒಟ್ಟು ಕುಟುಂಬದ ಆಸ್ತಿ ಎಂದು ನುಡಿಯುತ್ತಾರೆ . ಬಿಳಿಯಪ್ಪನವರು ತೀರಿಕೊಂಡ ವಿಚಾರ ಗೊತ್ತು . ಈರಪ್ಪ ,ಕರಿಯಣ್ಣ ಯಾವಾಗ ಮೃತ ಪಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗಳ ಮನೆಯಲ್ಲಿದ್ದ ಟ್ಯಾಕ್ಸ್ ಪೇಯಿಡ್ ರಶೀದಿಗಳನ್ನು ತೆಗೆದು ಕೊಂಡು ಬಂದು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ . ಕೌಂಟರ್ ಕ್ಲೇಮ್ ಸ್ವತ್ತುಗಳಲ್ಲಿ ನನಗೆ ಯಾವುದೇ ಅಧಿಕಾರ ಇಲ್ಲದಿದ್ದರೂ ಸಹ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು